**ಕರ್ನಾಟಕ ಸರ್ಕಾರ**

ಸಂಖ್ಯೆ:ಬಿಟಿಇ/01/ಇಎಪಿ/2017

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು-560 001,
ದಿನಾಂಕ:19-06-2017.

**ಇವರಿಗೆ,**

ಎಲ್ಲಾ ಸರ್ಕಾರಿ/ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ.

**ಮಾನ್ಯರೆ,**

**ವಿಷಯ:** ಏಪ್ರಿಲ್/ಮೇ 2017ರ ಡಿಪ್ಲೊಮಾ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸುವ ಬಗ್ಗೆ.

***

2017ರ ಏಪ್ರಿಲ್/ಮೇ ತಿಂಗಳಲ್ಲಿ ನಡೆಸಲಾದ ಸೆಮಿಸ್ಟರ್ ಪದ್ಧತಿಯ ವಿವಿಧ ಡಿಪ್ಲೋಮಾ ಪರೀಕ್ಷೆಯ ಫಲಿತಾಂಶಗಳನ್ನು **ದಿನಾಂಕ:21-06-2017ರ ಬುಧವಾರ** ಅಪರಾಹ್ನ 03:00 ಗಂಟೆಗೆ ಪ್ರಕಟಿಸಬೇಕಾಗಿರುತ್ತದೆ. ನಿಮ್ಮ ಪಾಲಿಟೆಕ್ನಿಕ್‌ಗೆ ಸಂಬಂಧಪಟ್ಟ ಫಲಿತಾಂಶವನ್ನು BTELinx ವೆಬ್‌ಪೋರ್ಟಲ್ ಮೂಲಕ ಕಾರ್ಯದರ್ಶಿಯವರ ಮುದ್ರಿತ ಸಹಿ ಇರುವ ಫಲಿತಾಂಶವನ್ನು ಪಡೆದು ಒಂದು ಪ್ರತಿಯನ್ನು ಮೇಲೆ ತಿಳಿಸಿದ ದಿನಾಂಕದಂದು ಅಪರಾಹ್ನ **03:00** ಗಂಟೆಗೆ ನಿಮ್ಮ ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸಬೇಕೆಂದು ಸೂಚಿಸಲಾಗಿದೆ.

ಇದಲ್ಲದೆ ಫಲಿತಾಂಶವು www.btekarlinx.net ವೆಬ್‌ಸೈಟ್‌ನಲ್ಲಿ 21-06-2017 ರಂದು ಅಪರಾಹ್ನ 03:00 ಗಂಟೆಗೆ ಲಭ್ಯವಿರುತ್ತದೆ.

2017ರ ನವೆಂಬರ್/ಡಿಸೆಂಬರ್ ಪರೀಕ್ಷಾ ಶುಲ್ಕ ಪಾವತಿಯ ವಿವರ, ಮರು ಮೌಲ್ಯಮಾಪನ/ಫೋಟೋಪ್ರತಿಗೆ ಅರ್ಜಿ ಸಲ್ಲಿಸುವ ಬಗ್ಗೆ, ಏಪ್ರಿಲ್/ಮೇ 2017ರ ಪರೀಕ್ಷಾ ಫಲಿತಾಂಶ ಹಿಂದಕ್ಕೊಪ್ಪಿಸುವ ಬಗ್ಗೆ ಸಂಬಂಧಪಟ್ಟ ಸುತ್ತೋಲೆ, ಜ್ಞಾಪನ, ಪರೀಕ್ಷಾ ಶುಲ್ಕ ಅಧಿಸೂಚನೆ, ಕ್ಯಾರಿ ಓವರ್ ಸಂಬಂಧ ಸರ್ಕಾರಿ ಆದೇಶ, ಶುಲ್ಕ ವಿನಾಯಿತಿ ಸಂಬಂಧ ಸರ್ಕಾರಿ ಆದೇಶ ಮತ್ತು ಪರೀಕ್ಷಾ ಶುಲ್ಕ ಪಾವತಿಸುವ ಅರ್ಜಿ ನಮೂನೆಗಳನ್ನು BTElinx online ವೆಬ್‌ಪೋರ್ಟಲ್ ಮೂಲಕ ಮತ್ತು www.btekarlinx.net, ಅಥವಾ http://www.dte.kar.nic.in, ವೆಬ್‌ಸೈಟ್‌ಗಳಿಂದ ಡೌನ್ ಲೋಡ್ ಮಾಡಿಕೊಳ್ಳಲು ಹಾಗೂ ವಿದ್ಯಾರ್ಥಿಗಳ ಮಾಹಿತಿಗಾಗಿ ಸೂಚನಾ ಫಲಕಗಳಲ್ಲಿ ಪ್ರಕಟಿಸಲು ಮತ್ತು ಕಡ್ಡಾಯವಾಗಿ ತರಗತಿಗಳಲ್ಲಿ ಸುತ್ತೋಲಿಸಲು ತಿಳಿಸಲಾಗಿದೆ.

ಅಂಕಪಟ್ಟಿಗಳನ್ನು ಸದ್ಯದಲ್ಲಿಯೆ ಕಳುಹಿಸಿ ಕೊಡಲಾಗುವುದು. ಇದಲ್ಲದೆ ಪ್ರವೇಶ ಅನುಮೋದನೆ ಪಡೆಯದ ಹಾಗೂ ಇತರೆ ಕಾರಣಗಳಿಗಾಗಿ ಅನರ್ಹರಾದ ಅಭ್ಯರ್ಥಿಗಳ ಅಂಕಪಟ್ಟಿಗಳನ್ನು ತಡೆಹಿಡಿಯಲಾಗುವುದೆಂದು ತಿಳಿಸಲಾಗಿದೆ. ಇಂತಹ ಪ್ರಕರಣಗಳಲ್ಲಿ ಸಂಸ್ಥೆಯವರು ಮಂಡಳಿಯ ಪತ್ರಕ್ಕಾಗಿ ಕಾಯದೇ ಅಗತ್ಯವಾದ ದಾಖಲೆಗಳನ್ನು ಕೂಡಲೇ ಕಳುಹಿಸಿದ ನಂತರವೇ ಫಲಿತಾಂಶ ಪ್ರಕಟಿಸಿ ಅಂಕಪಟ್ಟಿಗಳನ್ನು ಕಳುಹಿಸಲಾಗುವುದೆಂತಲೂ ತಿಳಿಸಲಾಗಿದೆ. ಪ್ರವೇಶಾನುಮೋದನೆಯಾಗದ / ಇತರೆ ಕಾರಣಗಳಿಗಾಗಿ ಅನರ್ಹರಾದವರ ಫಲಿತಾಂಶ ಪ್ರಕಟವಾಗಿದ್ದಲ್ಲಿ ಅಂಥ ಪ್ರಕರಣಗಳ ಬಗ್ಗೆ ಪ್ರಿನ್ಸಿಪಾಲರು ಕೂಡಲೇ ಪ್ರತ್ಯೇಕವಾಗಿ ಮಂಡಳಿಯ ಗಮನಕ್ಕೆ ತರಲು ಸೂಚಿಸಲಾಗಿದೆ.

ಸೆಮಿಸ್ಟರ್ ಪದ್ಧತಿಯ ಅಭ್ಯರ್ಥಿಗಳ ತಡೆ ಹಿಡಿಯಲಾದ ಫಲಿತಾಂಶವನ್ನು ಅಭ್ಯರ್ಥಿಗಳ ನೋಂದಣಿ ಸಂಖ್ಯೆಯುಳ್ಳ ಅರ್ಜಿ, ಹಾಜರಾದ ಬಗ್ಗೆ ಮಾಹಿತಿ, ಹಿಂದೆ ಪರೀಕ್ಷೆಗೆ ಹಾಜರಾದ ಅಂಕಪಟ್ಟಿಯ ಜೆರಾಕ್ಸ್ ಪ್ರತಿ ಹಾಗೂ ಪರೀಕ್ಷಾ ಶುಲ್ಕ ಕಟ್ಟಿದ ರಶೀದಿಯೊಂದಿಗೆ ಫಲಿತಾಂಶ ಪ್ರಕಟವಾದ ಹದಿನೈದು ದಿನಗಳೊಳಗಾಗಿ ಪೂರ್ಣ ಮಾಹಿತಿಯನ್ನು ಸಲ್ಲಿಸಿ ತಪ್ಪದೇ ಫಲಿತಾಂಶ ಪಡೆಯುವಂತೆ ತಿಳಿಸಲಾಗಿದೆ. ತಪ್ಪಿದಲ್ಲಿ ಆ ಸಂಸ್ಥೆಯ ಪ್ರಿನ್ಸಿಪಾಲರೇ ಜವಾಬ್ದಾರರಾಗಿರುತ್ತಾರೆ.

**ವಿಶೇಷ ಸೂಚನೆ:-**

2017ರ ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಗಳ ಥಿಯರಿ ಉತ್ತರ ಪತ್ರಿಕೆಗಳ ಫೋಟೋ ಪ್ರತಿ / ಮರು ಮೌಲ್ಯಮಾಪನಕ್ಕೆ ತಮ್ಮ ಸಂಸ್ಥೆಯ ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿಗಳ ವಿವರಗಳನ್ನು ಈಗಾಗಲೇ ತಾವು ಉಪಯೋಗಿಸುತ್ತಿರುವ BTE Linx ವೆಬ್‌ಪೋರ್ಟಲ್ ಮೂಲಕ onlineನಲ್ಲಿ ತುಂಬಿಸಬೇಕಾಗಿರುತ್ತದೆ. ಪ್ರತಿ ಅರ್ಜಿಯ ವಿವರಗಳನ್ನು ಆನ್‌ಲೈನ್‌ನಲ್ಲಿ ತುಂಬಿಸಿದ ನಂತರ ಬರುವಂತಹ ಒಂದು Acknowledgement Slip ಪ್ರಿಂಟ್ ತೆಗೆದು ಆಯಾ ಅರ್ಜಿಗಳಿಗೆ ಲಗತ್ತಿಸಿ ನಂತರ ಸದರಿ ಅರ್ಜಿಗಳನ್ನು ತಮ್ಮ ಮೇಲು ರುಜು ಮಾಡಿ ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು, ಇವರಿಗೆ ನಿಗಧಿತ ದಿನಾಂಕದೊಳಗೆ ರವಾನಿಸಲು ಎಲ್ಲಾ ಪ್ರಿನ್ಸಿಪಾಲರುಗಳಿಗೆ ತಿಳಿಸಲಾಗಿದೆ.

ಆನ್‌ಲೈನ್‌ನಲ್ಲಿ ಭರ್ತಿ ಮಾಡಿ Acknowledgement Slip ಲಗತ್ತಿಸದೇ ಇರುವ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲವೆಂದು ತಿಳಿಸಲಾಗಿದೆ.

ತಮ್ಮ ನಂಬುಗೆಯ,

**ಕಾರ್ಯದರ್ಶಿ,**
**ತಾಂತ್ರಿಕ ಪರೀಕ್ಷಾ ಮಂಡಳಿ,**
**ಬೆಂಗಳೂರು.**

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರ ಗಮನಕ್ಕೆ ಮತ್ತು ಮುಂದಿನ ಸೂಕ್ತ ಕ್ರಮಕ್ಕೆ ಕಳುಹಿಸಲಾಗಿದೆ.

**ಪ್ರತಿ:**

1. ಆಡಳಿತಾಧಿಕಾರಿಯವರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ಸಹಾಯಕ ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಆಪ್ತಶಾಖೆ, ನಿರ್ದೇಶಕರ ಕಛೇರಿ, ನಿರ್ದೇಶನಾಲಯ, ಬೆಂ.
4. ಆಪ್ತಶಾಖೆ (ಪರೀಕ್ಷೆ)
5. ಇಎಸ್‌ಟಿ(8)ಬಿ ವಿಭಾಗಕ್ಕೆ
6. ಸಂಬಂಧಪಟ್ಟ ಸಿಬ್ಬಂದಿಯವರಿಗೆ,
7. ಸಂಬಂಧಪಟ್ಟ ಕೇಂದ್ರಗಳ ಪ್ರಿನ್ಸಿಪಾಲರಿಗೆ.
8. ಇಬಿಎಲ್. ಆರ್.ಡಿ.ಎಂ, ಇಸಿಎಲ್ ವಿಭಾಗಕ್ಕೆ
9. ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
10. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
11. ಕಛೇರಿ ಪ್ರತಿ